<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು ಶ್ರೀ ಆರ್ ಯು ವಕೀಲರಿಂದಃ ಪ್ರತಿವಾದಿಯರ ಪರವಾಗಿಃ</u>

ಈ ಕೇಸಿನಲ್ಲಿ ವಾದಿ ಪರ ವಕೀಲರು ಸಾಕ್ಷಿ ಪಟ್ಟಿ ಹಾಕಿದ್ದು ಸದರಿ ಸಾಕ್ಷಿ ಪಟ್ಟಿಯಲ್ಲಿ ಬಯಣ್ಣ ಮತ್ತು ಬೋರಮ್ಮ ಹಾಗೂ ನಾನು, ವಾದಿ ಮಂಜುನಾಥ್ ಇವರಿಗೆ ಸಂಬಂಧಿಕರಿರುತ್ತೇವೆ ಎಂದರೆ ಸರಿ. ವಾದಿ ಪ್ರತಿವಾದಿಯರು ಈಗಲೂ ಜೊತೆಯಲ್ಲಿ ವಾಸವಾಗಿರುವುದಿಲ್ಲ, ಬೇರೆ ಬೇರೆ ವಾಸವಾಗಿರುತ್ತಾರೆ. ವಾದಿ ಪ್ರತಿವಾದಿಯರು ದಾವಾ ಆಸ್ತಿ ಕುರಿತು ಆಗಾಗ ಜಗಳವಾಡುತ್ತಿದ್ದು ಅವರ ಮಧ್ಯೆ ರಾಜೀ ಪಂಚಾಯತಿ ಮಾಡಲು ಹೋಗಿರುವುದಿಲ್ಲ ನಾನು ಸದರಿಯವರ ಮಧ್ಯೆ ಗಲಾಟೆಯಾದಾಗ ಪೊಲೀಸ್ ಠಾಣೆಗೆ ಹೋಗಿ ದೂರು ಕೊಡಲು ಪ್ರಯತ್ನಿಸಿರುವುದಿಲ್ಲ. ಪ್ರತಿವಾದಿ ಎ ಬಿ ತಿಪ್ಪೇಸ್ವಾಮಿ ಯವರು ಒಟ್ಟು ಕುಟುಂಬದ ಕರ್ತ ಆಗಿ ನಿರ್ವಹಣೆ ಮಾಡಿರುವುದಿಲ್ಲ. ನಾವು ವಾದಿ ಪ್ರತಿವಾದಿಯರ ಮಧ್ಯೆ ಗಲಾಟೆಯಾದಾಗ ರಾಜೀ ಪಂಚಾಯತಿ ಮಾಡಿರುವುದಿಲ್ಲ. 1985 ನೇ ಇಸವಿಯಲ್ಲಿ ಪಾಪಕ್ಕ ಹನುಮಸಂದ್ರ ಮಲ್ಲಯ್ಯ ಇವರು ದಿನಾಂಕಃ18.04.1985 ನೇ ಇಸವಿಯಲ್ಲಿ ಮಲ್ಲಿಕಾರ್ಜುನ ಇವರ ಹೆಸರಿಗೆ ಮರಣಾ ಶಾಸನ ಪ್ರಮಾಣ ಪತ್ರ ಬರೆದಿರುವುದನ್ನು ನೋಡಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಕ್ಕೆ ಹಾಜರುಪಡಿಸಿರುವುದಿಲ್ಲ. ಮನೆಯಲ್ಲಿ ಇರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಪ್ರತಿವಾದಿ ಜಮೀನಿನ ಖಾತೆ ಬದಲಾವಣೆ ಮಾಡಿಸಲು ಪ್ರಯತ್ನಿಸಿದ್ದುದ್ದರಿಂದ ವಾದಿ ಈ

ದಾವಾ ಮಾಡಿರುತ್ತಾರೆ. ವಾದಿ ಮಂಜುನಾಥ್ ಇವರು ಪ್ರತಿವಾದಿ ತಿಪ್ಪೇಸ್ವಾಮಿ ಕುಟುಂಬಕ್ಕೆ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸಣ್ಣ ಮಕ್ಕಳು ಇದ್ದಾಗ ತಿಪ್ಪೇಸ್ವಾಮಿ ವಾದಿಯರ ಜೊತೆ ಇರಲಿಲ್ಲ ಅವರು ಬೇರೆಯವರ ಜೊತೆ ಮದುವೆಯಾಗಿ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿಗೆ ಯಾವುದೇ ರೀತಿ ಹಕ್ಕು ಹಿತಾಸಕ್ತಿ ಇಲ್ಲದಿದ್ದರೂ ಸಹ ನಾನು ವಾದಿ ಮತ್ತು ಬೋರಮ್ಮ ಬಯ್ಯಣ್ಣ ಇವರೊಂದಿಗೆ ಸೇರಿಕೊಂಡು ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯಲಿಲ ಭಾಗ ಕೇಳಲು ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ ಚಳ್ಳಕೆರೆ.